ಕರ್ನಾಟಕ ಸರ್ಕಾರ
ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ,
ಬೆಂಗಳೂರು 560002

# ಸುತ್ತೋಲೆ

ಸಂಖ್ಯೆ: ನೃ.ನಾ.ಪ್ರ.ಕಾ.ವಿ.ವ.ಪ್ರದರ್ಶನ/2016-17 ದಿನಾಂಕ 03/10/2016

ವಿಷಯ : 2016-17ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ವಿಜ್ಞಾನ ಶಿಕ್ಷಕರಿಗೆ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಆಯೋಜಿಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ದಿನಾಂಕ: 15/07/2016
2 . NCERT Guidelines 44th JNNSMEE- Children 2016-17
3. ಈ ಕಛೇರಿಯ ಪತ್ರ ಸಮಸಂಖ್ಯೆ ದಿನಾಂಕ: 23/09/2016

***

ವಿದ್ಯಾರ್ಥಿಗಳಲ್ಲಿ ಅನ್ವೇಷಣಾ ಗುಣ ಬೆಳೆಸುವ, ಸೃಜನಾತ್ಮಕ ಆಲೋಚನೆಗಳಿಗೆ ಅವಕಾಶ ನೀಡುವ , ಪ್ರತಿಭೆಯನ್ನು ಹುಡುಕುವ ಮತ್ತು ಪೋಷಿಸುವ ಉದ್ದೇಶದೊಂದಿಗೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ NCERT, ನವದೆಹಲಿ ಇವರ ಸಹಯೋಗದಲ್ಲಿ ವಿಜ್ಞಾನ ವಸ್ತುಪ್ರದರ್ಶನವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. 2016-17 ನೇ ಸಾಲಿನಲ್ಲಿ ಜಿಲ್ಲಾ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನವನ್ನು ಪ್ರಾಂಶುಪಾಲರು, ಡಯಟ್ ಬಳ್ಳಾರಿ ರವರ ಸಹಯೋಗದಲ್ಲಿ ವಸ್ತು ಪ್ರದರ್ಶನವನ್ನು ಆಯೋಜಿಸಲಾಗುತ್ತಿದೆ.ಈ ಕಛೇರಿಯ ಉಲ್ಲೇಖ-3ರ ತಿದ್ದುಪಡಿ ಆದೇಶದಲ್ಲಿ ವಿಜ್ಞಾನ ವಸ್ತುಪ್ರದರ್ಶನ ಆಯೋಜಿಸಬೇಕಾದ ವೇಳಾ ಪಟ್ಟಿಯನ್ನು ಈಗಾಗಲೇ ತಿಳಿಸಲಾಗಿದೆ.

***2016-17 ನೇ ಸಾಲಿನ ವಸ್ತುಪ್ರದರ್ಶನಕ್ಕೆ ನಿಗದಿಪಡಿಸಿದ ಮುಖ್ಯ ವಿಷಯ ಹಾಗೂ ಉಪವಿಷಯಗಳು***

ವಿದ್ಯಾರ್ಥಿಗಳ ವಿಭಾಗ:

| | |
|---|---|
| ಮುಖ್ಯ ವಿಷಯ: "ರಾಷ್ಟ್ರದ ನಿರ್ಮಾಣಕ್ಕೆ ವಿಜ್ಞಾನ ,ತಂತ್ರಜ್ಞಾನ ಮತ್ತು ಗಣಿತ"<br>**Main Theme: "Science ,Technology and Mathematics for Nation building"** | |
| ಉಪವಿಷಯಗಳು: | |
| 1. ಆರೋಗ್ಯ, | 1. Health |
| 2. ಕೈಗಾರಿಕೆ | 2. Industry |
| 3. ಸಾರಿಗೆ ಮತ್ತು ಸಂಪರ್ಕ | 3. Transport and Communication |
| 4.ಸುಸ್ಥಿರ ಪರಿಸರಕ್ಕಾಗಿ ನವೀಕರಿಸಬಹುದಾದ ಸಂಪನ್ಮೂಲಗಳಲ್ಲಿ ನಾವೀನ್ಯತೆ | 4. Innovation in Renewable resources for sustainable environment |
| 5. ಆಹಾರ ಉತ್ಪಾದನೆಯಲ್ಲಿ ನಾವೀನ್ಯತೆ ಹಾಗೂ ಆಹಾರ ಭದ್ರತೆ | 5. Innovation in Food production and food security |
| 6. ನಿತ್ಯ ಜೀವನಕ್ಕೆ ಗಣಿತದ ಪರಿಹಾರಗಳು | 6. Mathematical solutions for everyday life |

ಶಿಕ್ಷಕರ ವಿಭಾಗದಲ್ಲಿ ವಿಜ್ಞಾನ/ ಗಣಿತ ವಿಷಯಕ್ಕೆ ಸಂಬಂಧಿಸಿದ ಮಾದರಿಗಳ ಪ್ರದರ್ಶನಕ್ಕೆ ಅವಕಾಶವಿದೆ.

**ಭಾಗವಹಿಸುವವರು:** ಜಿಲ್ಲಾ ಹಂತದಲ್ಲಿ 6 ಉಪ ವಿಷಯಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಒಬ್ಬರು ಶಿಕ್ಷಕ/ಶಿಕ್ಷಕಿ.

ರಾಜ್ಯಮಟ್ಟದಲ್ಲಿ ಭಾಗವಹಿಸಲಿರುವ ಸ್ಪರ್ಧಿಗಳು ಮತ್ತು ಅವರನ್ನು ಕರೆತರುವ ಶಿಕ್ಷಕರು ಈ ಕೆಳಕಂಡ ಸೂಚನೆಗಳನ್ನು ಅಗತ್ಯವಾಗಿ ಪಾಲಿಸುವುದು.

- ಪ್ರತಿ ಜಿಲ್ಲೆಯಿಂದ ರಾಜ್ಯಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು ಮತ್ತು ಅವರ ಮಾರ್ಗದರ್ಶಿ ಶಿಕ್ಷಕರು ಹಾಗೂ ಶಿಕ್ಷಕರ ವಿಭಾಗದಲ್ಲಿ ಜಿಲ್ಲೆಯಿಂದ ಒಬ್ಬರು ಶಿಕ್ಷಕರಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ.
- ಎಲ್ಲಾ ಸಂದರ್ಭಗಳಲ್ಲಿಯೂ ಸ್ಪರ್ಧಿಗಳ ನಡವಳಿಕೆ ಉತ್ತಮವಾಗಿದ್ದು, ಬೇರೆಯವರಿಗೆ ತೊಂದರೆಯಾಗದಂತೆ ಇರಲಿ.
- ವಸ್ತು ಪ್ರದರ್ಶನದ ಉತ್ತಮ ಮಾದರಿಗಳ ಆಯ್ಕೆ , ಬಹುಮಾನಗಳ ಘೋಷಣೆ, ಪ್ರಶಸ್ತಿ ಪತ್ರಗಳ ವಿತರಣೆ ಹಾಗೂ ಪ್ರಯಾಣ ಭತ್ಯೆಯ ವಿತರಣೆ ನಿಗದಿತ ಸಮಯದಲ್ಲಿ ಮಾತ್ರ ನಡೆಯಲಿದ್ದು- **ಈ ಕುರಿತಂತೆ ಸ್ಪರ್ಧಿಗಳು/ಶಿಕ್ಷಕರು ಆಯೋಜಕರಿಗೆ ತೊಂದರೆ ನೀಡಬಾರದು.**
- ಸ್ಪರ್ಧಿಗಳ ಮಾದರಿಗಳಿಗೆ ಅವಶ್ಯವೆನಿಸುವ ಹೆಚ್ಚುವರಿ Tool Kit ನ್ನು & ಅಗತ್ಯ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವುದು.

- ಪ್ರತಿ ಸ್ಪರ್ಧಿಯೂ ಕಡ್ಡಾಯವಾಗಿ ತಮ್ಮ ಮಾದರಿಯ ಕುರಿತು Write up ನ 4 ಪ್ರತಿಗಳನ್ನು ತರುವುದು.
- ಪ್ರದರ್ಶನದ ಎರಡೂ ದಿನಗಳು ಸ್ಪರ್ಧಿಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿಯೇ ಮಾದರಿ ಪ್ರದರ್ಶಿಸುವುದು ಮತ್ತು ಪ್ರದರ್ಶನದ ಅವಧಿಯಲ್ಲಿ ಸ್ಟಾಲ್‌ನಲ್ಲಿಯೇ ಇರತಕ್ಕದ್ದು. ಆಯೋಜಕರ ಪೂರ್ವಾನುಮತಿಯಿಲ್ಲದೇ ಬೇರೆಯವರಿಗೆ ನಿಗದಿ ಪಡಿಸಿರುವ ಸ್ಥಳವನ್ನು ಉಪಯೋಗಿಸಿಕೊಳ್ಳುವಂತಿಲ್ಲ.
- ಮಾದರಿಗೆ ಸಂಬಂಧಿಸಿದಂತೆ ಸ್ಪರ್ಧಿಗಳ ಭಾಗವಹಿಸುವಿಕೆ ವಿವರಣೆ ಉತ್ಸಾಹ ಭರಿತವಾಗಿರಲಿ, ವಿವರಣೆ ಕುರಿತಂತೆ ಸ್ಪರ್ಧಿಗಳ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಟೇಪ್ ರೆಕಾರ್ಡರ್(ಪೂರ್ವ ಧ್ವನಿ ಮುದ್ರಿತ ) ಕ್ಯಾಸೆಟ್/ಸಿಡಿ ,ಲ್ಯಾಪ್ ಟಾಪ್ ಮುಂತಾದವುಗಳನ್ನು ಬಳಸಿಕೊಳ್ಳಬಹುದು.
- ತೀರ್ಪುಗಾರರ ನಿರ್ಣಯವೇ ಅಂತಿಮವಾಗಿದ್ದು , ಇದನ್ನು ಗೌರವಪೂರ್ವವಾಗಿ ಸ್ವೀಕರಿಸುವುದು. ತೀರ್ಪು ಕುರಿತಂತೆ ಯಾವುದೇ ಚರ್ಚೆಗೆ ಅವಕಾಶವಿರುವುದಿಲ್ಲ.
- **ದಕ್ಷಿಣ ವಲಯ ಮಟ್ಟಕ್ಕೆ ಆಯ್ಕೆ:** ಗುಂಪು ವಿಭಾಗದಲ್ಲಿ 15 ತಂಡಗಳು, ವೈಯಕ್ತಿಕ ವಿಭಾಗದಲ್ಲಿ 20 ಹಾಗೂ ಶಿಕ್ಷಕರ ವಿಭಾಗದಲ್ಲಿ 15 ಶಿಕ್ಷಕರು ಮುಂದಿನ ಹಂತದಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಈ ಬಾರಿ ಪುದುಚೆರಿಯಲ್ಲಿ ಆಯೋಜನೆಯಾಗಲಿದೆ.
- ಸ್ಪರ್ಧೆಯ ಫಲಿತಾಂಶವನ್ನು ಪ್ರಕಟಿಸಿದ ನಂತರ ದಕ್ಷಿಣ ವಲಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕಡ್ಡಾಯವಾಗಿ ಹಾಜರಿದ್ದು, ವಿ.ಐ.ಟಿ.ಎಂ ರವರು ನೀಡುವ ಸೂಚನೆಗಳು ಮತ್ತು ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸುವುದು. **ದಕ್ಷಿಣ ವಲಯ ಮಟ್ಟಕ್ಕೆ ಆಯ್ಕೆಯಾಗಿ ಫಲಿತಾಂಶ ಪ್ರಕಟಣೆಯ ಸಮಯದಲ್ಲಿ ಉಪಸ್ಥಿತರಿಲ್ಲದ ತಂಡವನ್ನು ಕೈಬಿಡಲಾಗುವುದು.**
- ನಿಯಮಾನುಸಾರ ಪ್ರಯಾಣ ಭತ್ಯೆಯನ್ನು ನೀಡಲಿದ್ದು , ಸ್ಪರ್ಧಿಗಳು ಮತ್ತು ಮಾರ್ಗದರ್ಶಿ ಶಿಕ್ಷಕರಿಗೆ ಸಾಮಾನ್ಯ ಬಸ್ ದರ ಅಥವಾ ಸಾಮಾನ್ಯ ರೈಲು ದರ ಮಾತ್ರ ನೀಡಲಾಗುವುದು. **ಇದಕ್ಕೆ ಅಗತ್ಯವಿರುವ ಟಿಕೇಟುಗಳನ್ನು ಒದಗಿಸುವುದು ಕಡ್ಡಾಯವಾಗಿದೆ.** ಸ್ಪರ್ಧಿಗಳು ಪ್ರಯಾಣಕ್ಕೆ ಲಭ್ಯವಿರುವ ರೈಲು ಸೌಲಭ್ಯವನ್ನು ಗರಿಷ್ಠವಾಗಿ ಬಳಸಿಕೊಳ್ಳುವುದು. ಟಿಕೇಟ್ ಹಾಜರು ಪಡಿಸದಿದ್ದಲ್ಲಿ ಸಾಮಾನ್ಯ ಬಸ್ ಅಥವಾ ಸಾಮಾನ್ಯ ರೈಲು ದರಗಳಲ್ಲಿ ಕನಿಷ್ಠದರವನ್ನು ನೀಡಲಾಗುವುದು (ದಿನಭತ್ಯೆಯನ್ನು ನೀಡಲಾಗುವುದಿಲ್ಲ).
- ಸ್ಪರ್ಧಿಗಳಿಗೆ ಪ್ರದರ್ಶನದ ಸಮಯದಲ್ಲಿ ಸ್ಥಳೀಯ ಸಸ್ಯಾಹಾರಿ ಆಹಾರವನ್ನು ಒದಗಿಸಲಾಗುವುದು .ಈ ವಿಷಯವಾಗಿ ಆಯೋಜಕರನ್ನು ಮುಜುಗರಕ್ಕೀಡುಮಾಡದಿರಲು ತಿಳಸಿದೆ. ಆಯೋಜಕರು ವ್ಯವಸ್ಥೆಗೊಳಸಿರುವ ಆಹಾರದ ಕೌಂಟರ್‌ಗಳಲ್ಲಿ ಶಿಸ್ತು ಬದ್ಧವಾಗಿ ಆಹಾರವನ್ನು ಪಡೆಯುವುದು.
- **ಯಾವುದೇ ಕಾರಣಕ್ಕೂ ನಿಗದಿತ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆ ವಿದ್ಯಾರ್ಥಿಗಳು, ಶಿಕ್ಷಕರು ಅಥವಾ ಪೋಷಕರು ಬಂದಿದ್ದಲ್ಲಿ, ಊಟ, ಉಪಾಹಾರ , ವಸತಿ ವ್ಯವಸ್ಥೆಯನ್ನು ಅವರೇ ಮಾಡಿಕೊಳ್ಳತಕ್ಕದ್ದು. ಆಯೋಜಕರಿಂದ ಯಾವುದೇ ಸೌಲಭ್ಯ ಇರುವುದಿಲ್ಲ.**
- ದೂರದಿಂದ ಬರುವ ಸ್ಪರ್ಧಿಗಳಿಗೆ ಹಿಂದಿನ ದಿನ ರಾತ್ರಿ ನೊಂದಣಿ ಮಾಡಿಕೊಳ್ಳಲು ಅವಕಾಶವಿದೆ. ಎರಡು ದಿನಗಳ ಅವಧಿಯ ಕಾರ್ಯಕ್ರಮಕ್ಕೆ ಅಗತ್ಯವಾದ ಉಡುಪುಗಳು, ಹಾಸಿಗೆ, ಹೊದಿಕೆ, ಅಗತ್ಯವಿರುವ ಔಷಧಿಗಳನ್ನು ತೆಗೆದುಕೊಂಡು ಹೋಗುವುದು.
- ವಿದ್ಯಾರ್ಥಿಗಳನ್ನು ಕರೆತರುವ ಮಾರ್ಗದರ್ಶಿ ಶಿಕ್ಷಕರು ಪ್ರದರ್ಶನದ ಅವಧಿಯಲ್ಲಿ ವಿದ್ಯಾರ್ಥಿಗಳ ಜೊತೆಯಲ್ಲಿಯೇ ಇರತಕ್ಕದ್ದು. ವಿದ್ಯಾರ್ಥಿಗಳಿಗೆ ಅಗತ್ಯ ಬೆಂಬಲ ಮತ್ತು ಮಾರ್ಗದರ್ಶನ ನೀಡುವುದು.
- ಡಯಟ್ ಬಳ್ಳಾರಿ ರವರು ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರರ್ದನದ ಆಯೋಜನಾ ದಿನಾಂಕಗಳ, ಸ್ಥಳ , ಸಂಪರ್ಕಿಸಬೇಕಾದ ಅಧಿಕಾರಿ /ಸಿಬ್ಬಂದಿ ರವರ ಸಂಪರ್ಕ ಸಂಖ್ಯೆಗಳ ಮಾಹಿತಿಗಳನ್ನು ತಮಗೆ ನೀಡಲಿದ್ದಾರೆ.

Kulanah
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ,

ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರಿಗೆ ತುರ್ತು ಕ್ರಮಕ್ಕಾಗಿ

**ಪ್ರತಿಗಳು:**

1) ನಿರ್ದೇಶಕರು.ಡಿ.ಎಸ್.ಇ.ಆರ್.ಟಿ – ಇವರಿಗೆ ಮಾಹಿತಿಗಾಗಿ
2) ನಿರ್ದೇಶಕರು, ವಿ.ಐ.ಟಿ.ಎಂ ಬೆಂಗಳೂರು– ಇವರಿಗೆ ಮಾಹಿತಿಗಾಗಿ
3) ರಾಜ್ಯದ ಎಲ್ಲಾ ಉಪನಿರ್ದೇಶಕರು ಸಾ.ಶಿ.ಇ ಅಗತ್ಯ ಕ್ರಮಕ್ಕಾಗಿ.
4) ಪ್ರಾಂಶುಪಾಲರು ಡಯಟ್ ಬಳ್ಳಾರಿ – ಅಗತ್ಯ ಕ್ರಮಕ್ಕಾಗಿ.
5) ಸಂಯೋಜಕರು, ವಿ.ಐ.ಟಿ.ಎಂ, ಅಂಚೆ ಪೆಟ್ಟಿಗೆ ಸಂಖ್ಯೆ: 5216, ಕಸ್ತುರಬಾ ರಸ್ತೆ, ಬೆಂಗಳೂರು-1 ರವರ ಮಾಹಿತಿಗಾಗಿ..